ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ
ವಿಜ್ಞಾನಗಳ ವಿಶ್ವವಿದ್ಯಾಲಯ
ನಂದಿನಗರ, ಬೀದರ – 585 401.

# ಡಿಪ್ಲೋಮಾ (ಪಶು ಸಂಗೋಪನೆ)
# ಕೋರ್ಸಿನ
# ಶೈಕ್ಷಣಿಕ ಮಾಹಿತಿ ಹಾಗೂ ನಿಯಮಾವಳಿಗಳು

**2018–19**

## ಪರಿವಿಡಿ


| ಕ್ರ.ಸಂ. | ವಿವರ | ಪು.ಸಂ. |
|---|---|---|
| 1. | ಶೀರ್ಷಿಕೆ ಹಾಗೂ ಪ್ರಾರಂಭ | 1 |
| 2. | ವಿವರಣೆಗಳು | 2 |
| 3. | ಪ್ರವೇಶ | 2 |
| 4. | ಪ್ರವೇಶ ವಿಧಾನ | 4 |
| 5. | ಶುಲ್ಕದ ವಿವರ | 4 |
| 6. | ನೋಂದಣಿ | 5 |
| 7. | ಪ್ರತಿ ಸೆಮಿಸ್ಟರ್‌ಗೆ ನೋಂದಣಿ ಕ್ರಮ | 6 |
| 8. | ಪಠ್ಯಕ್ರಮ ವಿವರ | 7 |
| 9. | ಪರೀಕ್ಷೆ ಮತ್ತು ಮೌಲ್ಯಮಾಪನ | 8 |
| 10. | ಫಲಿತಾಂಶ | 9 |
| 11. | ಶಿಷ್ಯವೇತನ | 11 |
| 12. | ಪರೀಕ್ಷೆಗಳನ್ನು ನಡೆಸುವುದು ಹಾಗೂ ಅನುಚಿತ ಕ್ರಮಗಳನ್ನು ತಡೆಗಟ್ಟುವುದು | 12 |
| 13. | ಬೋಧನಾ ಕ್ರಮ ಮತ್ತು ಶಿಸ್ತು ಪಾಲನೆ | 15 |
| 14. | ಫಲಿತಾಂಶ ಅನುಮೋದಿಸುವ ಹಾಗೂ ಪ್ರಮಾಣ ಪತ್ರ ನೀಡುವ ಪ್ರಾಧಿಕಾರ | 18 |
| 15. | ಇತರೆ ವಿಷಯಗಳು | 19 |

# ಡಿಪ್ಲೋಮಾ (ಪಶು ಸಂಗೋಪನೆ)
# ಶೈಕ್ಷಣಿಕ ಮಾಹಿತಿ ಹಾಗೂ ನಿಯಮಾವಳಿಗಳು

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಕಾಯಿದೆ 2004 ರ (ಕರ್ನಾಟಕ ಕಾಯಿದೆ ನಂ 9, 2004) ಪರಿಚ್ಛೇದ 5 ಅ, ಡಿ. ಮತ್ತು ಪರಿಚ್ಛೇದ 6 ಸಿ, ಡಿ ರಲ್ಲಿ ನಿಗದಿಪಡಿಸಿದ ಅಧಿಕಾರದನ್ವಯ ಸರ್ಕಾರಿ ಆದೇಶ (ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ 116 ಪಸಸೇ 2011 ದಿನಾಂಕ 14–10–2011) ರಂತೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಡಿಯಲ್ಲಿ 2011–12 ನೇ ಶೈಕ್ಷಣಿಕ ವರ್ಷದಿಂದ ಎಸ್.ಎಸ್.ಎಲ್.ಸಿ. ತೇರ್ಗಡೆಯದ ಗ್ರಾಮಿಣ ಅಭ್ಯರ್ಥಿಗಳೀಗೆ ಸೀಮಿತವಾಗಿ ಪಶುಸಂಗೋಪನೆಯಲ್ಲಿ 2 ವರ್ಷದ ಡಿಪ್ಲೋಮಾ ಪ್ರಾರಂಭಿಸಲಾಗಿದ್ದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಕಾಯಿದೆ 2004 ರ (ಕರ್ನಾಟಕ ಕಾಯಿದೆ ನಂ. 9, 2004) ಪರಿಚ್ಛೇದ 30 (3) ರಲ್ಲಿ ನಮೂದಿಸಿದಂತೆ ಈ ವಿಶ್ವವಿದ್ಯಾಲಯುದ ವಿದ್ಯಾವಿಷಯುಕ ಪರಿಷತ್ತಿನ ಅನುಮೋದನೆಯೊಂದಿಗೆ ಕೆಳಗಿನ ನಿಯಮಾವಳಿಗಳನ್ನು ರೂಪಿಸಿದೆ. ಸದರಿ ನಿಯಮಾವಳಿಗಳು 2011–12ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವುದರ ಜೊತೆಗೆ ಈ ಕುರಿತಂತೆ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನಿಗದಿ ಪಡಿಸಬಹುದಾದ ಮಾರ್ಪಾಟು ನಿಯಮಗಳನ್ನು ಪ್ರತ್ಯೇಕವಾಗಿ ಪ್ರಕಟಿಸಿ ಜಾರಿಗೆ ತರಲಾಗುವುದು.

**1.0 ಶೀರ್ಷಿಕೆ ಹಾಗು ಪ್ರಾರಂಭ**

1.1. ಈ ನಿಯಮಾವಳಿಗಳು “ಕರ್ನಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪಶು ಸಂಗೋಪನೆಯಲ್ಲಿ 2 ವರ್ಷದ ಡಿಪ್ಲೋಮಾದ ಶೈಕ್ಷಣಿಕ ವಿವರ ಹಾಗೂ ನಿಯಮಾವಳಿಗಳು 2011–12 ಎಂದು ಕರೆಯಲ್ಪಡುವವು.

1.2 ಈ ನಿಯಮಾವಳಿಗಳು ಪಶು ಸಂಗೋಪನೆಯಲ್ಲಿ 2 ವರ್ಷದ ಡಿಪ್ಲೋಮಾಗೆ ಪ್ರಮಾಣ ಪತ್ರ ಪಡೆಯಲು ಬೇಕಾದ ಬೋಧನೆಗೆ ಸಂಬಂಧಪಟ್ಟಿದ್ದು 2011–12ನೇಯ ಹಾಗೂ ನಂತರದ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತವೆ.

## 2.0 ವಿವರಣೆಗಳು

**2.1 ಶೈಕ್ಷಣಿಕ ವರ್ಷ :**

ಒಂದು ಶೈಕ್ಷಣಿಕ ವರ್ಷವೆಂದರೆ ಪರೀಕ್ಷಾ ಅವಧಿ ಒಳಗೊಂಡಂತೆ ಎರಡು ಸೆಮಿಸ್ಟರ್ ಪಠ್ಯ ಕ್ರಮಗಳ ಅಧ್ಯಯನದ ಅವಧಿ.

**2.2 ಸೆಮಿಸ್ಟರ್ :**

ಒಂದು ಸೆಮಿಸ್ಟರ್ ಎಂದರೆ ಪರೀಕ್ಷಾ ಅವಧಿ ಸೇರಿದಂತೆ 21 ವಾರಗಳ ಪಠ್ಯಕ್ರಮಗಳ ಅಧ್ಯಯನದ ಅವಧಿ.

**2.3. ಪಠ್ಯಕ್ರಮ (ಕರಿಕ್ಯುಲಮ್) :**

ಡಿಪ್ಲೋಮಾ (ಪಶುಸಂಗೋಪನೆ) ಗೆ ಪ್ರಮಾಣ ಪತ್ರ ಹೊಂದಲು ವಿಶ್ವವಿದ್ಯಾಲಯವು ನಿಗದಿಪಡಿಸಿದ ಅಧ್ಯಯನ ವಿಷಯಗಳ ವಿವರ.

**2.4. ಕೋರ್ಸ್ (ವಿಷಯ) :**

ಒಂದು ಸೆಮಿಸ್ಟರನ ಅವಧಿಯಲ್ಲಿ ಬೋಧಿಸಲ್ಪಡುವ ಆಯಾ ವಿಷಯ್ದ ನಿಗದಿತ ಪಠ್ಯ ಕ್ರಮದ ಒಂದು ಭಾಗವು "ಕೋರ್ಸ್" ಆಗಿದ್ದು, ಇದು ನಿಗದಿತ ವಿಷಯ ಸಂಖ್ಯೆ, ಶಿರ್ಷಿಕೆ ಹಾಗೂ ಕೋರ್ಸ ಕ್ರೆಡಿಟ್‌ಗಳನ್ನು ಒಳಗೊಂಡಿರುವದು.

**2.5 ಕೋರ್ಸ್ ಕ್ರೇಡಿಟ್ :**

ಒಂದು ವಿಷಯದಲ್ಲಿ ಒಂದು ವಾರಕ್ಕೆ ನಿಗದಿಪಡಿಸಲಾದ ಬೋಧನಾ ಹಾಗೂ ಪ್ರಾಯೋಗಿಕ ಸಮಯದ ಅವಧಿ, ಒಂದು ಬೋಧನಾ ಕ್ರೇಡಿಟ್ ಅಂದರೆ ಒಂದು ವಾರದಲ್ಲಿ ಒಂದು ತಾಸಿನ ಬೋಧನಾ ಅಥವಾ ಮೂರು ತಾಸಿನ ಪ್ರಾಯೋಗಿಕ/ಕ್ಷೇತ್ರ ಪ್ರಾತ್ಯಕ್ಷತೆ ಕಾರ್ಯದ ಅವಧಿ ಎಂದರ್ಥ.

**2.6. ಅವಧಿ :**

ಡಿಪ್ಲೋಮಾ (ಪಶುಸಂಗೋಪನೆ) ಎರಡು ಶೈಕ್ಷಣಿಕ ವರ್ಷದ ಅವಧಿಯಾಗಿದ್ದು ನಾಲ್ಕು ಸೆಮಿಸ್ಟರ್‌ಗಳನ್ನು ಒಳಗೊಂಡಿರುತ್ತದೆ.

**2.7. ಬೋಧನಾ ಮಾಧ್ಯಮ :**

ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್ ಬೋಧನೆಯು ಕನ್ನಡ ಮಾಧ್ಯಮದಲ್ಲಿರುತ್ತದೆ.

**3.0 ಪ್ರವೇಶ :**

**3.1 ಪ್ರವೇಶಕ್ಕೆ ಅರ್ಹತೆ :**

ಡಿಪ್ಲೋಮಾ (ಪಶುಸಂಗೋಪನೆ)ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದ ನಿವಾಸಿಯಾಗಿದ್ದು ಒಂದರಿಂದ ಹತ್ತನೇ ತರಗತಿಯವರಿಗೆ ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿರಬೇಕು ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**3.2. ಪ್ರವೇಶಕ್ಕೆ ಆಯ್ಕೆ :**

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಪ್ರವೇಶ ಸಂಖ್ಯೆಗೆ ಸೀಮಿತವಾಗಿ ಚಾಲ್ತಿಯಲ್ಲಿರುವ ಮೆರಿಟ್ ಹಾಗೂ ರೋಸ್ಟರ್ ಪದ್ಧತಿ ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**3.3. ಸೀಟುಗಳ ಮೀಸಲಾತಿ :**

ಕರ್ನಾಟಕ ಸರಕಾರದ ಆದೇಶ ನಂ. ಎಸ್‌ಡಬ್ಲೂಎಲ್/251/ಬಿಸಿಎ/84 ದಿ. 31–1–1995 ರಂತೆ ಹಾಗೂ ಕಾಲಕಾಲಕ್ಕೆ ನಿಗದಿಗಿಳಿಸುವ ಮೀಸಲಾತಿ ಕ್ರಮವನ್ನು ಆಯ್ಕೆಯ ಪ್ರಕ್ರೀಯೆಯಲ್ಲಿ ಅಳವಡಿಸಿಕೊಳ್ಳಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಿಗೆ ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಅನುಸರಿಸಲಾಗುವುದು. ಅಂಗವಿಕಲರಿಗೆ, ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ, ಎನ್.ಸಿ.ಸಿ., ಸ್ಪೋರ್ಟ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ಆಂಗ್ಲೋಇಂಡಿಯನ್, ಡಿಫೆನ್ಸ್ ನೌಕರರ ಹಾಗೂ ಎಕ್ಸ್ ಸರ್ವಿಸಮನ್ ಮಕ್ಕಳಿಗೆ ಕರ್ನಾಟಕ ಸರಕಾರದ ನಿಯಮಾವಳಿಗಳಿಗೆ ಒಳಪಟ್ಟು ಹಾರಿಜಾಂಟಲ್ ಮೀಸಲಾತಿ ಅನುಸರಿಸಲಾಗುವುದು.

**3.4 ಪ್ರವೇಶಕ್ಕೆ ಅರ್ಜಿ ನಮೂನೆ :**

ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ ಅಧ್ಯಯನಕ್ಕೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕುಲಸಚಿವರು, ಕ.ಪ.ಪ.ಮೀ.ವಿ.ವಿ. ಅಂಚೆ ಪೆಟ್ಟಿಗೆ ಸಂ. 6, ನಂದಿನಗರ, ಬೀದರ–585 401 ಇವರಲ್ಲಿ ಪ್ರವೇಶಕ್ಕೆ ಕೋರಿ ಅರ್ಜಿ ಸಲ್ಲಿಸಬೇಕು. ಪ್ರವೇಶಕ್ಕೆ ನಿಗದಿಪಡಿಸಿದ ನಮೂನೆ ಹಾಗೂ ವಿವರಗಳನ್ನು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಪ್ರಕಟಣೆ ಅನುಸಾರ ಪಡೆದುಕೊಳ್ಳಬಹುದು. ಭರ್ತಿಮಾಡಿದ ಅರ್ಜಿಯನ್ನು ಪ್ರಕಟಣೆಯಲ್ಲಿ ನಿಗದಿಗೊಳಿಸಿದ ಶುಲ್ಕದೊಂದಿಗೆ ಕೊನೆಯ ದಿನಾಂಕದೊಳಗಾಗಿ ಕುಲಸಚಿವರು, ಕ.ಪ.ಪ.ಮೀ.ವಿ.ವಿ. ಅಂಚೆ ಪೆಟ್ಟಿಗೆ ಸಂ. 6, ನಂದಿನಗರ, ಬೀದರ–585 401. ಇವರಿಗೆ ಸಲ್ಲಿಸಬೇಕು.

## 4.0 ಪ್ರವೇಶ ವಿಧಾನ

4.1 ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗೆ ನಿಗದಿಪಡಿಸಿದ ಮೀಸಲಾತಿಯಂತೆ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಪ್ರಕಾರ ಪ್ರವೇಶ ನೀಡಲಾಗುವುದು.

4.2 ಅಭ್ಯರ್ಥಿಗಳ ಪ್ರವೇಶವು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಅರ್ಜಿಯಲ್ಲಿ ನಮೂಸಿರುವಂತೆ ಎಲ್ಲಾ ವಿವರಗಳನ್ನು ಹಾಗೂ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಮೂಲ ದಾಖಲಾತಿಯ ಪರಿಶೀಲನೆ.
2. ನಿಗದಿಪಡಿಸಿದ ಕೇಂದ್ರಗಳಲ್ಲಿ ಸೀಟುಗಳ ಲಭ್ಯತೆ.
3. ಕೋರ್ಸ್‌ಗೆ ನಿಗದಿಗೊಳಿಸಿದ ಶುಲ್ಕವನ್ನು ನಿರ್ಧಿಷ್ಟ ದಿನಾಂಕದೊಳಗೆ ವಿಶ್ವವಿದ್ಯಾಲಯಕ್ಕೆ ಸಂದಾಯಮಾಡುವುದು.
4. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿದ ಶೈಕ್ಷಣಿಕ ಸಂಸ್ಥೆಯಿಂದ ವರ್ಗಾವಣೆ ಪತ್ರ ಪಡೆದು ಸಲ್ಲಿಸುವುದು.
5. 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿದ್ದರ ಕುರಿತಂತೆ ನಿಗದಿತ ಪ್ರಮಾಣ ಪತ್ರ ಸಲ್ಲಿಸುವುದು.
6. ಮೀಸಲಾತಿಗೆ ಒಳಪಟ್ಟ ಸೀಟುಗಳಿಗೆ ಪ್ರವೇಶವನ್ನು ಕಟ್ಟುನಿಟ್ಟಾಗಿ ಆಯಾ ವರ್ಗಗಳಲ್ಲಿನ ಅಭ್ಯರ್ಥಿಗಳನ್ನು ಮೆರಿಟ್ ಆಧಾರದಲ್ಲಿ ಆಯ್ಕೆಮಾಡಿ ಪ್ರವೇಶ ನೀಡಲಾಗುವುದು. ಈ ಮೀಸಲಾತಿ ವರ್ಗಗಳಲ್ಲಿ ಅಭ್ಯರ್ಥಿಗಳ ಕೊರತೆಯಿಂದ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ, ಇಂತಹ ಸೀಟುಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾವಣೆಯಾದವುಗಳೆಂದು ಪರಿಗಣಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

## 5.0 ಶುಲ್ಕದ ವಿವರ :

5.1 ಪ್ರತಿ ಸೆಮಿಸ್ಟರ್ ಶುಲ್ಕವನ್ನು ವಿಶ್ವವಿದ್ಯಾಲಯವು ಪ್ರಕಟಿಸಿದಂತೆ ನಿಗದಿತವಾಗಿ ಪಾವತಿಸುವುದು.

5.2 ಒಮ್ಮೆ ಸಂದಾಯ ಮಾಡಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ.

5.3 ಭದ್ರತಾ ಠೇವಣಿ ಶುಲ್ಕವನ್ನು ಯಾವುದಾದರೂ ಹಣ ಬಾಕಿ ಇದ್ದಲ್ಲಿ ಕಟಾವಣೆ ಮಾಡಿಕೊಂಡು ಅಭ್ಯರ್ಥಿಯು ಡಿಪ್ಲೋಮಾವನ್ನು ಮುಗಿಸಿದಲ್ಲಿ ಅಥವಾ ಮುಂದುವರೆಸದೇ ಮಧ್ಯದಲ್ಲಿ ನಿಲ್ಲಿಸಿದ್ದಲ್ಲಿ ವಾಪಾಸು ನೀಡಲಾಗುವುದು.

ವಿದ್ಯಾರ್ಥಿಯು ಭದ್ರತಾ ಠೇವಣಿ ಹಣವನ್ನು ಸಂಬಂಧಿಸಿದ ಪ್ರತಿ ವಿಭಾಗದವರು ನೀಡಿದ ಬೇಬಾಕಿ ಪ್ರಮಾಣಪತ್ರವನ್ನು ಆಧರಿಸಿ ಹಿಂದಕ್ಕೆ ಪಡೆಯಬಹುದು.

5.4. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಿ / ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು ನೊಂದಣಿ ಶುಲ್ಕದ ಜೊತೆಗೆ ಸರ್ಕಾರದಿಂದ ಮರುಪಾವತಿಸಲ್ಪಡದ ಇತರೇ ಶುಲ್ಕವನ್ನು ಕೂಡಾ ಸಂದಾಯ ಮಾಡತಕ್ಕದ್ದು.

5.5 ನಿಗದಿಪಡಿಸದ ಎಲ್ಲಾ ಶುಲ್ಕಗಳು ವಿಶ್ವವಿದ್ಯಾಲಯದ ಆದೇಶದ ಪ್ರಕಾರ ಕಾಲಕಾಲಕ್ಕೆ ಬದಲಾವಣೆಯಾಗಬಹುದು.

5.6. ಅಂಕಪಟ್ಟಿಯ ನಕಲು ಪ್ರತಿ, ಬೋನಾಫೈಡ್ ಪ್ರಮಾಣಪತ್ರ, ಶೈಕ್ಷಣಿಕ ಪ್ರಗತಿಯ ಪ್ರತಿ ಮತ್ತು ಇನ್ನಿತರ ಯಾವುದೇ ಪ್ರಮಾಣ ಪತ್ರವನ್ನು ವಿಶ್ವವಿದ್ಯಾಲಯವು ಕಾಲ ಕಾಲಕ್ಕೆ ನಿಗದಿಪಡಿಸಿದ ಶುಲ್ಕ ಸಂದಾಯ ಮಾಡಿ ಪಡೆದುಕೊಳ್ಳುವುದು.

5.7 ಶೈಕ್ಷಣಿಕ ಶುಲ್ಕ ಹೊರತುಪಡಿಸಿ ಅಭ್ಯರ್ಥಿಗಳು ವಿದ್ಯಾರ್ಥಿನಿಲಯವನ್ನು ಬಳಸಿಕೊಂಡಲ್ಲಿ ನಿಗದಿಪಡಿಸಿದ ವಿದ್ಯಾರ್ಥಿನಿಲಯದ ಶುಲ್ಕ ಸಂದಾಯ ಮಾಡಬೇಕಾಗುತ್ತದೆ.

6.0 **ನೋಂದಣಿ** :

6.1 ಆಯ್ಕೆಯಾದ ಅಭ್ಯರ್ಥಿಗಳು ನೋಂದಣಿ ಶುಲ್ಕವನ್ನು ನಿಗದಿತ ದಿನಾಂಕದೊಳಗೆ ಸಂದಾಯಮಾಡಿ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ನೋಂದಣಿ ಪ್ರಕ್ರಿಯೆಗೆ ವರದಿ ಮಾಡಿಕೊಳ್ಳಬೇಕು. ಸಂಬಂಧಟ್ಟ ಪ್ರಾಚಾರ್ಯರು ಅಭ್ಯರ್ಥಿಗಳ ನೋಂದಣಿಗಾಗಿ ಮಾರ್ಗದರ್ಶನ ಮಾಡುವರು.

6.2 ಕಾಯ್ದಿರಿಸಿದ ಪಟ್ಟಿಯಲ್ಲಿನ ಅಭ್ಯರ್ಥಿಗಳ ನೋಂದಣಿಯನ್ನು ಮೊದಲು ಸೆಮಿಸ್ಟರ್ ಪ್ರಾರಂಭವಾದ ನಾಲ್ಕು ವಾರಗಳ ನಂತರ ಸ್ಥಗಿತಗೊಳಿಸಲಾಗುವುದು. ಕಾಯ್ದಿರಿಸದ ಪಟ್ಟಿಯಲ್ಲಿನ ಅಭ್ಯರ್ಥಿಯ ಹಾಜರಾತಿಯನ್ನು ಆತನು ಕೋರ್ಸಿಗೆ ನೋಂದಣಿ ಮಾಡಿದ ದಿನದಿಂದ ಪರಿಗಣಿಸಲಾಗುವುದು.

6.3 ಪ್ರವೇಶ ಪಡೆದ ಅಭ್ಯರ್ಥಿಯು ಮೊದಲನೆಯ ಸೆಮಿಸ್ಟರ್‌ನಲ್ಲಿ ಅಭ್ಯಸಿಸುವುದು ಕಡ್ಡಾಯ, ಯಾವುದೇ ಕಾರಣಕ್ಕೂ ಮೊದಲ ಸೆಮಿಸ್ಟರ್‌ನಲ್ಲಿ ಗೈರುಹಾಜರಾದಲ್ಲಿ ಅವರ ಪ್ರವೇಶವು ರದ್ದಾಗುವುದು. ಮೊದಲ ಸೆಮಿಸ್ಟರ್‌ದಲ್ಲಿ ಅಭ್ಯರ್ಥಿಯು ಕನಿಷ್ಠ ಒಂದು ವಿಷಯದಲ್ಲಿ ಪಾಸಾಗುವುದು ಕಡ್ಡಾಯ, ಇಲ್ಲದಿದ್ದಲ್ಲಿ ಅಂತಹವರ ಪ್ರವೇಶವು ಕೂಡಾ ರದ್ದಾಗುವುದು.

## 7.0 ಪ್ರತಿ ಸೆಮಿಸ್ಟರ್‌ಗೆ ನೋಂದಣಿ ಕ್ರಮ :

7.1 ಮೊದಲ ಸೆಮಿಸ್ಟರ್ ಕೊನೆಗೊಳ್ಳುವ 3 ವಾರ ಮುಂಚಿತವಾಗಿಯೇ 2ನೇಯ ಸೆಮಿಸ್ಟರ್‌ಗೆ ನೋಂದಣಿ ಪ್ರಕ್ರಿಯೆ ಆರಂಭವಾಗುವುದು.

7.2 ಸೆಮಿಸ್ಟರ್ ಪ್ರಾರಂಭವಾದ ದಿನವು ಆ ಸೆಮಿಸ್ಟರ್‌ಗೆ ನೋಂದಣಿ ಮಾಡಿಸುವ ಕೊನೆಯ ದಿನವಾಗಿರುವುದು. ಆದಾಗ್ಯೂ ನಿಗದಿತ ಕೊನೆಯ ದಿನಾಂಕದ ನಂತರ ಗರಿಷ್ಠ ಆರು ಕೆಲಸದ ದಿನಗಳ ವರೆಗೆ ಪ್ರತಿದಿನ ರೂ. 10/– ರಂತೆ ದಂಡ ಶುಲ್ಕದೊಂದಿಗೆ ನೋಂದಣಿ ಮಾಡಿಸಲು ಅವಕಾಶವಿರುವುದು.

7.3 ಪ್ರತಿ ಸೆಮಿಸ್ಟರ್‌ಗೆ ನೋಂದಣಿ ಮಾಡಿಸಲು ಅಭ್ಯರ್ಥಿಯು ವೈಯಕ್ತಿಕವಾಗಿ ಉಪಸ್ಥಿತರಿರಬೇಕು ಹಾಗೂ ನೋಂದಣಿ ಸಿಬ್ಬಂದಿ ಗುರುತಿನ ಚೀಟಿ ಕೇಳಿದಲ್ಲಿ ಅಭ್ಯರ್ಥಿಗಳು ಒದಗಿಸಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಅಭ್ಯರ್ಥಿಯ ಅನುಪಸ್ಥಿತಿಯಲ್ಲಿ, ಸಂಬಂಧಪಟ್ಟ ಪ್ರಾಚಾರ್ಯರ ಅನುಮತಿಯೊಂದಿಗೆ ಅಭ್ಯರ್ಥಿಯು ನೋಂದಣಿ ಮಾಡಿಸಬಹುದು.

7.4 ಪ್ರತಿ ಸೆಮಿಸ್ಟರ್‌ದ ಪ್ರಾರಂಭದಲ್ಲಿ ಅಭ್ಯರ್ಥಿಗಳು ನೋಂದಣಿ ಮಾಡಿಸುವ ಪೂರ್ವದಲ್ಲಿ ವಸತಿ ನಿಲಯ, ಗ್ರಂಥಾಲಯ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರುಗಳಿಂದ ಬಾಕಿಯನ್ನು ಸಂದಾಯಮಾಡಿ "ಬೇಬಾಕಿ" ಪ್ರಮಾಣ ಪತ್ರ ಪಡೆದು ಸಂಬಂಧಪಟ್ಟ ಪ್ರಾಚಾರ್ಯರಿಗೆ ಸಲ್ಲಿಸಬೇಕು.

7.5. ಡಿಪ್ಲೋಮಾಗೆ ಆಯ್ಕೆಯಾಗಿ ಮೊದಲ ಸೆಮಿಸ್ಟರ್‌ದಲ್ಲಿ ನೋಂದಣಿ ಮಾಡಿದ ಅಭ್ಯರ್ಥಿಗಳು ಸೆಮಿಸ್ಟರ್ ಮಧ್ಯದಲ್ಲಿ ಬಿಟ್ಟು ಹೋಗುವಂತಿಲ್ಲ, ಹಾಗೇನಾದರು ಅಭ್ಯರ್ಥಿಯು ಬಿಟ್ಟು ಹೋದಲ್ಲಿ ಅಥವಾ ಅಭ್ಯಾಸವನ್ನು ಮೊಟಕುಗೊಳಿಸಿದಲ್ಲಿ ಸದರಿ ಕೋರ್ಸ್‌ಗೆ ಅಭ್ಯರ್ಥಿಯ ಆಯ್ಕೆಯು ರದ್ದಾಗುವುದು.

7.6 ಪ್ರವೇಶ ಹೊಂದಿದ ನಂತರ ಅಭ್ಯರ್ಥಿಯು ಕೋರ್ಸ್ ಅವಧಿಯ ಮಧ್ಯದಲ್ಲಿಯೇ ಅಭ್ಯಾಸವನ್ನು ತಾತ್ಕಾಲಿಕವಾಗಿ ಮೊಟಕುಗೊಳಿಸಿದಲ್ಲಿ ಅಥವಾ ತನ್ನ ಪ್ರವೇಶವನ್ನು ರದ್ದುಗೊಳಿಸಲು ಬಯಸಿದ್ದಲ್ಲಿ ಅಂತಹ ಅಭ್ಯರ್ಥಿಯು ವಿಶ್ವವಿದ್ಯಾಲಯದ ಎಲ್ಲಾ ಬಾಕಿಯನ್ನು ತೀರಿಸಬೇಕಾಗುವುದು. ಅಭ್ಯರ್ಥಿಯು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ (ಉದಾ: ವಸತಿ ನಿಲಯ, ಗ್ರಂಥಾಲಯ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಇತ್ಯಾದಿ) ಪಡೆದ "ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಚಾರ್ಯರು ಪರಿಶೀಲಿಸಿ, ದೃಢಪಡಿಸಿದ ನಂತರ ಸೂಕ್ತ ಶೀಪಾರಿಸ್ಸಿನೊಂದಿಗೆ ಪ್ರವೇಶ ರದ್ದತಿಗಾಗಿ ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

## 8.0 ಪಠ್ಯಕ್ರಮ ವಿವರ :

ಸೆಮಿಸ್ಟರ್‌ದಲ್ಲಿ ಪಠ್ಯಕ್ರಮಗಳ ವಿಂಗಡಣೆ

| ಮೊದಲ ಸೆಮಿಸ್ಟರ್ | | | |
|---|---|---|---|
| ಕ್ರ.ಸಂ. | ವಿಷಯ ಸಂ. | ವಿಷಯ | ಬೋಧನೆ ಅವಧಿ (ಕ್ರೇಡಿಟ್ ತಾಸುಗಳು) |
| 1. | ವಿಎಸ್‌ಸಿ 111 | ಪ್ರಾಣಿಗಳ ಅಂಗಾಂಗಗಳು ಮತ್ತು ಅವುಗಳ ಕಾರ್ಯ | 2+1=3 |
| 2. | ಎಎಸ್‌ಸಿ 111 | ಹೈನುರಾಸುಗಳ ನಿರ್ವಹನೆ | 2+1=3 |
| 3. | ಎಎಸ್‌ಸಿ 112 | ಕುಕ್ಕುಟ / ಕೋಳಿ ಪಾಲನೆ | 1+1=2 |
| 4. | ಎಎಸ್‌ಸಿ 113 | ಮಾಂಸಕ್ಕಾಗಿ ಉಪಯೋಗಿಸುವ ಪ್ರಾಣಿಗಳು ಮತ್ತು ಮಾಂಸ ಉತ್ಪಾದನೆ | 2+1=3 |
| 5. | ಎಎಸ್‌ಸಿ 114 | ಮೇವು ಉತ್ಪಾದನೆ | 2+1=3 |
| 6. | ವಿಎಸ್‌ಸಿ 112 | ಪಶುವೈದ್ಯಕೀಯ ಔಷಧಿ ಸಂಗ್ರಹಾಲಯ ಮತ್ತು ತಯಾರಿಕಾ ಸೂತ್ರಗಳು | 1+1=2 |
| 7. | ವಿಎಸ್‌ಸಿ 113 | ಪ್ರಾಣಿ ಪ್ರಯೋಗಾಲಯ ತಂತ್ರಗಳು | 1+1=2 |
| | | **ಒಟ್ಟು** | 11+7=18 |

| ಎರಡನೇ ಸೆಮಿಸ್ಟರ್ | | | |
|---|---|---|---|
| ಕ್ರ.ಸಂ. | ವಿಷಯ ಸಂ. | ವಿಷಯ | ಬೋಧನೆ ಅವಧಿ (ಕ್ರೇಡಿಟ್ ತಾಸುಗಳು) |
| 1. | ಎಎಸ್‌ಸಿ 121 | ಪಶು ಆಹಾರದ ಮೂಲಭೂತ ಅಂಶಗಳು | 1+1=2 |
| 2. | ವಿಎಸ್‌ಸಿ 121 | ಪಶು ಆರೋಗ್ಯದ ಮೂಲಭೂತ ಅಂಶಗಳು | 2+1=3 |
| 3. | ವಿಎಸ್‌ಸಿ 122 | ಜಾನುವಾರು ಕಾಯಿಲೆಗಳು | 1+1=2 |
| 4. | ಎಎಸ್‌ಸಿ 122 | ಪಶುಪಾಲನಾ ವಿಸ್ತರಣೆಯ ಮೂಲಭೂತ ಅಂಶಗಳು | 2+1=3 |
| 5. | ವಿಎಸ್‌ಸಿ 123 | ಪಶು ಆರೋಗ್ಯಕ್ಕೆ ಸಂಬಂಧಿಸಿದ ಲಸಿಕೆಗಳು | 0+1=1 |
| 6. | ವಿಎಸ್.ಸಿ 124 | ಪ್ರಾಣಿಗಳಲ್ಲಿ ಪ್ರಥಮ ಚಿಕಿತ್ಸೆ | 0+2=2 |
| 7. | ಎಎಸ್.ಸಿ 123 | ಮುದ್ದು ಮತ್ತು ಮೃಗಾಲಯ ಪ್ರಾಣಿಗಳ ಮೂಲಭೂತ ನಿರ್ವಹಣೆ | 1+1=2 |
| 8. | ಎಎಸ್‌ಸಿ 124 | ಕುಕ್ಕುಟಗಳಲ್ಲಿ ಮೊಟ್ಟೆಯಿಂದ ಮರಿಮಾಡುವ ಸ್ಥಳ ನಿರ್ವಹಣೆ | 1+1=2 |
| | | **ಒಟ್ಟು** | 8+9=17 |

| ಮೂರನೇ ಸೆಮಿಸ್ಟರ್ | | | |
|---|---|---|---|
| ಕ್ರ.ಸಂ. | ವಿಷಯ ಸಂ. | ವಿಷಯ | ಬೋಧನೆ ಅವಧಿ (ಕ್ರೇಡಿಟ್ ತಾಸುಗಳು) |
| 1. | ಡಬ್ಲ್ಯೂಇಎಕ್ಸ್ 211 | ಕೆಲಸದ ಅನುಭವ | 0+14=14 |

| ನಾಲ್ಕನೇ ಸೆಮಿಸ್ಟರ್ | | | |
|---|---|---|---|
| ಕ್ರ.ಸಂ. | ವಿಷಯ ಸಂ. | ವಿಷಯ | ಬೋಧನೆ ಅವಧಿ (ಕ್ರೇಡಿಟ್ ತಾಸುಗಳು) |
| 1. | ಡಬ್ಲ್ಯೂಇಎಕ್ಸ್ 221 | ಕೆಲಸದ ಅನುಭವ | 0+14=14 |

**ನಿಗದಿಗೊಳಿಸಲಾದ ಒಟ್ಟು ಕ್ರೆಡಿಟಗಳು** : 35+28=63

## 9.0 ಪರೀಕ್ಷೆ ಮತ್ತು ಮೌಲ್ಯಮಾಪನ

9.1 ಒಬ್ಬ ವಿದ್ಯಾರ್ಥಿಯು ನಿಗದಿಪಡಿಸಿದ ಮನದಂಡಕ್ಕೊಳಪಟ್ಟು ಸ್ಪರ್ಧಾತ್ಮಕವಾಗಿ ಅರ್ಹನಾಗಿದ್ದಾನೋ ಎಂಬುದನ್ನು ಪರೀಕ್ಷೆ ನಡೆಸಿ ಮೌಲ್ಯಮಾಪನ ನಡೆಸುವುದರ ಮೂಲಕ ಖಚಿತ ಪಡಿಸಿಕೊಳ್ಳಲಾಗುವುದು. ಶೈಕ್ಷಣಿಕ ಪದ್ಧತಿಯಲ್ಲಿ ಪಠ್ಯ ಮತ್ತು ಪ್ರಾಯೋಗಿಕ ಪರೀಕ್ಷೆಗಳನ್ನು ಪ್ರತ್ಯೇಕವಾಗಿ ನಡೆಸಲಾಗುವುದು ಮತ್ತು ತರಬೇತಿ ವಿಷಯಕ್ಕೆ ಆದ್ಯತೆ ನೀಡಲಾಗುವುದು ವಿದ್ಯಾರ್ಥಿಯು ತೇರ್ಗಡೆಯಾಗಬೇಕಾದಲ್ಲಿ ಕನಿಷ್ಠ ಶೇಕಡಾ 35 ಅಂಕಗಳನ್ನು ಗಳಿಸತಕ್ಕದ್ದು.

9.2 ಪರೀಕ್ಷೆಗಳಲ್ಲಿ ಅಂಕಗಳನ್ನು ನಿಗದಿಪಡಿಸುವಾಗ ವಸ್ತುನಿಷ್ಠ ಪ್ರಶ್ನೆ (ಆಬ್ಜೆಕ್ಟಿವ) ಮತ್ತು ವಿವರಣಾತ್ಮಕ (ಸಬ್ಜೆಕ್ಟಿವ) ಪ್ರಬಂಧೊತ್ತರಗಳಿಗೆ ಸಂಬಂಧಿಸಿದ ಪ್ರಶ್ನೆಗಳು 30:70 ಅನುಪಾತದಲ್ಲಿ ಇರತಕ್ಕದ್ದು.

9.3 ಪಶು ಸಂಗೋಪನೆ ಡಿಪ್ಲೋಮಾದಲ್ಲಿ ಪರೀಕ್ಷೆಗಳು ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಸೆಮಿಸ್ಟರ್ ಮಧ್ಯದಲ್ಲಿ ಮಧ್ಯಮಾವಧಿ ಪರೀಕ್ಷೆ ಮತ್ತು ಸೆಮಿಸ್ಟರ್ ಕೊನೆಯಲ್ಲಿ ಅಂತಿಮ ಲಿಖಿತ ಪರೀಕ್ಷೆ ಮತ್ತು ಪ್ರಾಯೋಗಿಕ ಪರೀಕ್ಷೆಗಳನ್ನು ಹೊಂದಿರುತ್ತದೆ. ಪರೀಕ್ಷೆಗಳನ್ನು ಆಯಾ ವಿಷಯ ಬೋಧಿಸುವ ಶಿಕ್ಷಕರು ನಡೆಸುವರು.

9.4 ಪರೀಕ್ಷೆಗಳ ಅಂಕಗಳ ವಿವರ :

| ಅ.ಸಂ. | ವಿವರ | ಪಠ್ಯ ಮತ್ತು ಪ್ರಾಯೋಗಿಕ ಅಂಶಗಳನ್ನು ಹೊಂದಿದ ವಿಷಯ | ಕೇವಲ ಪ್ರಾಯೋಗಿಕ ಅಂಶಗಳನ್ನು ಹೊಂದಿದ ವಿಷಯ |
|---|---|---|---|
| 1. | ಮಧ್ಯಮಾವಧಿ | 20 | -- |
| 2. | ಅಂತಿಮ ಲಿಖಿತ ಪರೀಕ್ಷೆ | 40 | -- |
| 3. | ಪ್ರಾಯೋಗಿಕ ಪರೀಕ್ಷೆ | 20 | 80 |
| 4. | ಪ್ರಾಯೋಗಿಕ ರಿಕಾರ್ಡ್ | 05 | 05 |
| 5. | ಮೌಖಿಕ ಪರೀಕ್ಷೆ | 10 | 10 |
| 6. | ಹಾಜರಾತಿ | 05 | 05 |
| | **ಒಟ್ಟು** | **100** | **100** |

9.5 ಹಾಜರಾತಿ : ಒಬ್ಬ ವಿದ್ಯಾರ್ಥಿಯ ಹಾಜರಾತಿಯನ್ನು ಪ್ರತಿ ವಿಷಯದಲ್ಲಿ ಅವನು / ಅವಳು ಹಾಜರಾದ ಪಠ್ಯ ಹಾಗೂ ಪ್ರಾಯೋಗಿಕ ತರಗತಿಗಳ ಆಧಾರದ ಮೇಲೆ ಪರಿಗಣಿಸಲಾಗುವುದು. ಪ್ರತಿ ವಿಷಯದಲ್ಲಿ ಕನಿಷ್ಠ ಶೇಕಡಾ 75ರಷ್ಟು ಹಾಜರಾತಿ ಹೊಂದಿರುವುದು ಕಡ್ಡಾಯವಾಗಿರುತ್ತದೆ. (ಇದು ವಿಶೇಷ ಸಂದರ್ಭದಲಿ ಪ್ರಾಚಾರ್ಯರು ನೀಡುವ 5% ರಷ್ಟರ ಹಾಜರಾತಿ ವಿನಾಯಿತಿಯನ್ನು ಒಳಗೊಂಡಿರುತ್ತದೆ).

9.6 ಮೂರು ಮತ್ತು ನಾಲ್ಕನೇ ಸೆಮಿಸ್ಟರ್ ಕೊನೆಗೆ ಡಬ್ಲೂಇಎಕ್ಸ್ 211 ಮತ್ತು 221ರ ಕೆಲಸದ ಅನುಭವದ ಕಾರ್ಯಧ್ಯಕ್ಷತೆಯ ಮೌಲ್ಯಮಾಪನವನ್ನು ನಿಯಮ 9.4 ರಲ್ಲಿರುವ ಅಂಕಗಳ ವಿವರದಂತೆ ಪರೀಕ್ಷೆ ನಡೆಸತಕ್ಕದ್ದು. ಈ ಪರೀಕ್ಷೆಗಳಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ ಶೇಕಡಾ 35 ರಷ್ಟು ಅಂಕಗಳನ್ನು ಹೊಂದಿದಲ್ಲಿ ಫಲಿತಾಂಶವನ್ನು ತೃಪ್ತಿಕರ ಎಂದು ಪರಿಗಣಿಸಲಾಗುವದು. ಪರೀಕ್ಷೆಯ ಫಲಿತಾಂಶ ತೃಪ್ತಿಕರವಾಗದಿದ್ದಲ್ಲಿ ಅಂತಹ ವಿಷಯದಲ್ಲಿ ನಾಲ್ಕನೇ ಸೆಮಿಸ್ಟರ್ ಮುಗಿದನಂತರ ಮತ್ತೆ ಒಂದು ತಿಂಗಳ ಅವಧಿಯ ತರಬೇತಿಯನ್ನು ಸ್ವಂತ ಖರ್ಚಿನಲ್ಲಿ ಪಡೆದು ಪುನಃ ಪರೀಕ್ಷೆಗೆ ಹಾಜರಾಗಿ ಡಿಪ್ಲೋಮಾಗೆ ನಿಯಮ 10.8 ರಂತೆ ನಿಗದಿಪಡಿಸಿದ ಗರಿಷ್ಠ ಅವಧಿಯಲ್ಲಿ ತೃಪ್ತಿಕರ ಫಲಿತಾಂಶವನ್ನು ಹೊಂದಬೇಕು.

10.0 **ಫಲಿತಾಂಶ** :

10.1 ಉತ್ತೀರ್ಣತೆ ಮತ್ತು ಅನುತ್ತೀರ್ಣತೆಯು ವಿದ್ಯಾರ್ಥಿಯ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಅಂಕಗಳ ಆಧಾರದ ಮೇಲೆ ನಿರ್ಧರಿಸಲಾಗುವುದು ಹಾಗೂ ಪ್ರತಿ ಸೆಮಿಸ್ಟರ್‌ನ ಫಲಿತಾಂಶವನ್ನು ಮುಂದಿನ ಸೆಮಿಸ್ಟರ್‌ನ ಪ್ರಾರಂಭಕ್ಕೆ ಮುನ್ನ ಪ್ರಾಚಾರ್ಯರು ಪ್ರಕಟಿಸುವರು.

10.2 ಮೊದಲ ವರ್ಷದಲ್ಲಿ ಒಬ್ಬ ವಿದ್ಯಾರ್ಥಿಯು ಮುಂದಿನ ಸೆಮಿಸ್ಟರ್‌ಗೆ ಪದೋನ್ನತಿ ಹೊಂದಲು ಪ್ರತಿ ವಿಷಯದಲ್ಲಿ ಕನಿಷ್ಟ ಶೇಕಡಾ 35 ರಷ್ಟು ಅಂಕಗಳನ್ನು ಹೊಂದಿರಬೇಕು.

10.3 ಪ್ರತಿ ವಿದ್ಯಾರ್ಥಿಯು ಮೊದಲು ವರ್ಷದ ಮೊದಲನೆ ಸೆಮಿಸ್ಟರ್‌ನಲ್ಲಿ ನಿಗದಿಪಡಿಸಿದ ವಿಷಯಗಳ ಪೈಕಿ ಕನಿಷ್ಟ ಒಂದರಲ್ಲಿ ಕಡ್ಡಾಯವಾಗಿ ಪಾಸಾಗಲೇಬೇಕು. ಇಲ್ಲದಿದ್ದಲ್ಲಿ ಅವನ/ಅವಳ ಡಿಪ್ಲೋಮಾ ಪ್ರವೇಶವು ರದ್ದಾಗುವುದು. ಒಬ್ಬ ವಿದ್ಯಾರ್ಥಿಯು ಒಂದು ಅಥವಾ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣ ಹೊಂದಿದಾಗಲೂ ಮುಂದಿನ ಸೆಮಿಸ್ಟರ್‌ಗೆ ನೋಂದಣಿ ಪಡೆಯಲು ಅರ್ಹನಾಗಿರುತ್ತಾನೆ, ಆದರೆ ಅವನು/ಅವಳು ಅನುತ್ತೀರ್ಣ ಹೊಂದಿದ ವಿಷಯಗಳಲ್ಲಿ ಪೂರಕ ಪರೀಕ್ಷೆಗೆ ನಿಗದಿತ ಶುಲ್ಕ ಪಾವತಿಸಿ ಹಾಜರಾಗಿ ಉತ್ತೀರ್ಣರಾಗಬೇಕು.

10.4 ಮೊದಲನೆಯ ಮತ್ತು ಎರಡನೆಯ ಸೆಮಿಸ್ಟರ್‌ನಲ್ಲಿ ನಿಗದಿಪಡಿಸಲಾದ ಒಟ್ಟು ವಿಷಯಗಳಲ್ಲಿ ಶೇಕಡಾ 80 ಅಂದರೆ ಒಟ್ಟು 35 ಕೋರ್ಸ್ ಕ್ರೆಡಿಟ್‌ಗಳಲ್ಲಿ 28 ಕೋರ್ಸ್ ಕ್ರೆಡಿಟ್‌ಗಳನ್ನು ಪಾಸಾದಲ್ಲಿ ಮಾತ್ರ ಎರಡನೇ ಶೈಕ್ಷಣಿಕ ವರ್ಷದಲ್ಲಿ ಡಬ್ಲ್ಯೂಇಎಕ್ಸ್ 211 ಮತ್ತು 221 ಕೋರ್ಸ್‌ಗಳಿಗೆ ನೋಂದಣಿ ಪಡೆಯಲು ಅರ್ಹರಗಿರುತ್ತಾರೆ.

10.5. ಪೂರಕ ಪರೀಕ್ಷೆಯನ್ನು ಸಂಬಂಧಿಸಿದ ವಿಷಯದಲ್ಲಿ ಸೆಮಿಸ್ಟರ್ ಪ್ರಾರಂಭಗೊಗಂಡ 45 ದಿನಗಳೊಳಗೆ ಒಂದು ಸಲಕ್ಕೆ ಸೀಮಿತವಾಗಿ ಮಾತ್ರ ಜರುಗಿಸುವುದು. ವಿದ್ಯಾರ್ಥಿಯು ಈ ಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣ ಹೊಂದಿದಲ್ಲಿ ಆ ವಿಷಯದಲ್ಲಿ ಪಾಸಾಗುವವರಿಗೂ ಮುಂಬರುವ ಸೆಮಿಸ್ಟರ್‌ನಲಿ ನಡೆಸುವ ಪೂರಕ ಪರೀಕ್ಷೆಗಳಿಗೆ ನಿಯಮಾವಳಿ 10.8 ರಂತೆ ಗರಿಷ್ಠ ಅವಧಿಯಲ್ಲಿ ನಿಗಧಿತ ಶುಲ್ಕ ಪಾವತಿಸಿ ಹಾಜರಾಗಿ ತೃಪ್ತಿಕರ ಫಲಿತಾಂಶವನ್ನು ಹೊಂದಬೇಕು.

10.6 ಪೂರಕ ಪರೀಕ್ಷೆಗಳ ಅಂಕಗಳ ವಿವರ :

| ಆ.ಸಂ. | | ವಿವರ | ಅಂಕಗಳು |
|---|---|---|---|
| ಪಠ್ಯ ಮತ್ತು ಪ್ರಾಯೋಗಿಕ ಅಂಶಗಳನ್ನು ಹೊಂದಿದ ವಿಷಯ | | | |
| 1. | ಲಿಖಿತ ಪರೀಕ್ಷೆ | | 80 |
| 2. | ಪ್ರಾಯೋಗಿಕ ರಿಕಾರ್ಡ್ | | 05⁺ |
| 3. | ಹಾಜರಾತಿ | | 05⁺ |
| 4. | ಮೌಖಿಕ ಪರೀಕ್ಷೆ | | 10⁺ |
| | | ಒಟ್ಟು | 100 |

| ಕೇವಲ ಪ್ರಾಯೋಗಿಕ ಅಂಶಗಳನ್ನು ಹೊಂದಿದ ವಿಷಯ | | | |
|---|---|---|---|
| 1. | ಪ್ರಾಯೋಗಿಕ ಪರೀಕ್ಷೆ | | 80 |
| 2. | ಪ್ರಾಯೋಗಿಕ ರಿಕಾರ್ಡ್ | | 05⁺ |
| 3. | ಹಾಜರಾತಿ | | 05⁺ |
| 4. | ಮೌಖಿಕ ಪರೀಕ್ಷೆ | | 10⁺ |
| | | ಒಟ್ಟು | 100 |

* ಪ್ರಾಯೋಗಿಕರಿಕಾರ್ಡ್, ಹಾಜರಾತಿಗೆ ಮತ್ತು ಮೌಖಿಕ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಯು ಹಿಂದಿನ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಮಾತ್ರ ಪರಿಗಣಿಸಲಾಗುವುದು.

10.7 ವಿದ್ಯಾರ್ಥಿಯು ಪರೀಕ್ಷೆಗೆ ಗೈರು ಹಾಜರಾದಲ್ಲಿ ಆ ಪರೀಕ್ಷೆಗೆ “0” ಸೊನ್ನೆ ಅಂಕವೆಂದು ಪರಿಗಣಿಸಿ ಫಲಿತಾಂಶವನ್ನು ನಿರ್ಧರಿಸಲಾಗುವುದು. ಆಯಾ ವಿಷಯದಲ್ಲಿ ತೇರ್ಗಡೆಯಾಗಲು ನಿಗದಿಪಡಿಸಿದ ಕನಿಷ್ಠ ಅಂಕಗಳನ್ನು ಪಡೆಯುವಲ್ಲಿ ವಿದ್ಯಾರ್ಥಿಯು ವಿಫಲನಾದಾಗ ಮತ್ತು ಆ ವಿಷಯದಲ್ಲಿ ಕಡ್ಡಾಯವಾಗಿ ಕನಿಷ್ಠ ಶೇಕಡಾ 75ರಷ್ಟು ಹಾಜರಾತಿ ಹೊಂದಿದಾಗ ಮಾತ್ರ. ಪೂರಕ ಪರೀಕ್ಷೆಗೆ ಅವಕಾಶವಿರುತ್ತದೆ. ಅಂತಹ ವಿದ್ಯಾರ್ಥಿಗಳು ಪ್ರತಿ ವಿಷಯಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸಿದ ಪರೀಕ್ಷಾ ಶುಲ್ಕದೊಂದಿಗೆ ಅಂತಿಮ ಪರೀಕ್ಷೆ ಫಲಿತಾಂಶ ಪ್ರಕಟಗೊಂಡ ನಂತರದ ಸೆಮಿಸ್ಟರ್ ಪ್ರಾರಂಭವಾದ 10 ದಿನಗಳೊಳಗಾಗಿ ನೋಂದಣಿ ಮಾಡಿಸಬೇಕು.

10.8 ಗರಿಷ್ಠ ನಾಲ್ಕು ಶೈಕ್ಷಣಿಕ ವರ್ಷಗಳ ಕಾಲಾವಕಾಶವನ್ನು ಅಂದರೆ 8 ಸೆಮಿಸ್ಟರ್ ಅವಧಿಯಲ್ಲಿ ಡಿಪ್ಲೋಮಾದ ಎಲ್ಲಾ ಪಠ್ಯಕ್ರಮಗಳನ್ನು ಸಂಪೂರ್ಣಗೊಳಿಸಲು ನಿಗದಿ ಪಡಿಸಲಾಗಿದೆ. ವಿದ್ಯಾರ್ಥಿಯು ನಿಗದಿಪಡಿಸಿದ ಎಲ್ಲಾ ಪಠ್ಯ ವಿಷಯಗಳನ್ನು ತೇರ್ಗಡೆಯಾಗಿ ಕೆಲಸದ ಅನುಭವದಲ್ಲಿ ತೃಪ್ತಿಕರವಾಗಿ ತರಬೇತಿಯನ್ನು ಪಡೆದು ನಂತರ ಅವನು/ಅವಳು ವಿಷಯವಾರು ಪಡೆದ ಅಂಕಗಳನ್ನು ಶೇಕಡಾವಾರು ಪರಿವರ್ತಿಸಿ ಅಂತಿಮ ಡಿಪ್ಲೋಮಾದ ಫಲಿತಾಂಶವನ್ನು ಪ್ರಕಟಿಸಲಾಗುವುದು.

11.0 **ಶಿಷ್ಯವೇತನ** :

ಪಶುಸಂಗೋಪನೆ ಡಿಪ್ಲೋಮಾ ಕೋರ್ಸ್‌ನ ಅಭ್ಯರ್ಥಿಗಳಿಗೆ ಸರಕಾರದ ಆದೇಶದನ್ವಯ ನಿಗದಿಪಡಿಸಲಾದ ಶಿಷ್ಯವೇತನ (ಸ್ಟೈಪಂಡ್) ನೀಡಲಾಗುವುದು. ಈ ಶಿಷ್ಯವೇತನವನ್ನು ಪ್ರತಿ ಸೆಮಿಸ್ಟರ್‌ಗೆ ಸೀಮಿತವಾಗಿ ಎರಡು ಶೈಕ್ಷಣಿಕ ವರ್ಷಕ್ಕೆ ಮಾತ್ರ ಪ್ರತಿ ವಿದ್ಯಾರ್ಥಿಗೆ ನೀಡಲಾಗುವುದು. ಈ ಶಿಷ್ಯವೇತನ ಮುಂದುವರೆಸುವಿಕೆಯು ಅಭ್ಯರ್ಥಿಯ ನಡತೆ, ಪ್ರತಿ ತಿಂಗಳದ ಹಾಜರಾತಿ ಹಾಗೂ ಪ್ರತಿ ಸೆಮಿಸ್ಟರ್‌ದಲ್ಲಿನ ಶೈಕ್ಷಣಿಕ ಪ್ರಗತಿಯ ಮೇಲೆ ಅವಲಂಬಿಸಿರುತ್ತದೆ. ಇನ್ನುಳಿದಂತೆ ಯಾವುದೇ ಅಭ್ಯರ್ಥಿಯು ಡಿಪ್ಲೋಮಾ ಕೋರ್ಸ್‌ನ್ನು ಎರಡು ಶೈಕ್ಷಣಿಕ ವರ್ಷದ ಅವಧಿಯಲ್ಲಿ ಕಾರಣಾಂತರಗಳಿಂದ ಮುಂದುವರಿಸದಿದ್ದಲ್ಲಿ ಅಂತವರಿಗೆ ಶಿಷ್ಯವೇತನವನ್ನು ಕೊಡಮಾಡಲಾಗುವುದಿಲ್ಲ. ನಿಗದಿತ ಅವಧಿಯೊಳಗೆ ವಿದ್ಯಾರ್ಥಿಯು ಡಿಪ್ಲೋಮಾವನ್ನು ಸಂಪೂರ್ಣಗೊಳಿಸದಿದ್ದಲ್ಲಿ ಅಂತಹ ವಿದ್ಯಾರ್ಥಿಗೆ ನೀಡಲಾದ ಶಿಷ್ಯವೇತನದ ಎಲ್ಲಾ ಮೊತ್ತವನ್ನು ವಸೂಲಿ ಮಾಡಲಾಗುವುದು.

## 12.0 ಪರೀಕ್ಷೆಗಳನ್ನು ನಡೆಸುವುದು ಹಾಗೂ ಅನುಚಿತ ಕ್ರಮಗಳನ್ನು ತಡೆಗಟ್ಟುವುದು :

12.1. ಶಿಕ್ಷಕರಿಗೆ

12.1.1 ಪರೀಕ್ಷಾ ಪ್ರಶ್ನಾವಳಿಗಳನ್ನು ಬೆರಳಚ್ಚು ಮಾಡಿಸುವಾಗ ಸಂಬಂಧಪಟ್ಟ ವಿಷಯದ ಶಿಕ್ಷಕರು ಕಡ್ಡಾಯವಾಗಿ ಹಾಜರಿರಲೇಬೇಕು. ಪ್ರಾಚಾರ್ಯರು ಯಾವುದೇ ಸಂದರ್ಭದಲ್ಲಿ ಸಂಬಂಧಿಸಿದ ಶಿಕ್ಷಕ ಸಿಬ್ಬಂದಿಯನ್ನು ಹೊರತುಪಡಿಸಿ ಬೇರಾವುದೇ ಸಿಬ್ಬಂದಿಗೆ ಈ ಕಾರ್ಯವನ್ನು ವಹಿಸಬಾರದು.

12.1.2 ಪರೀಕ್ಷಾ ಪ್ರಶ್ನಾವಳಿಗಳನ್ನು ಗೌಪ್ಯವಾಗಿಡಲು ಎಲ್ಲಾ ರೀತಿಯ ಎಚ್ಚರಿಕೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

12.1.3 ಸಂಬಂಧಪಟ್ಟ ಪ್ರಾಚಾರ್ಯರು ಯಾವುದೇ ಅನುಚಿತನ ಕ್ರಮಗಳಿಗೆ ಅವಕಾಶವಾಗದಂತೆ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಸೂಕ್ತ ಸ್ಥಳವನ್ನು ವ್ಯವಸ್ಥೆ ಮಾಡಬೇಕು.

12.1.4 ಪರೀಕ್ಷೆ ಪ್ರಾರಂಭರದ ವೇಳೆಯನಂತರ 10 ನಿಮಿಷ ತಡವಾಗಿ ಬಂದರೆ, ಪರೀಕ್ಷೆಗೆ ಹಾಜರಾಗಲು ಅವಕಾಶ ಕೊಡುವಂತಿಲ್ಲ. ಅದರಂತೆ ಅಭ್ಯರ್ಥಿಯು ಪರೀಕ್ಷೆಯ ಅವಧಿಯು ಕೊನೆಗೊಳ್ಳುವುದಕ್ಕಿಂತ 20 ನಿಮಿಷ ಮೊದಲು ಪರೀಕ್ಷೆ ಕೊಠಡಿಯಿಂದ ಹೊರ ಹೋಗಲು ಅವಕಾಶ ನೀಡುವಂತಿಲ್ಲ.

12.1.5 ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಗಳು ತಮ್ಮೊಂದಿಗೆ ಯಾವುದೇ ರೀತಿಯ ಪುಸ್ತಕ, ಹಾಳೆಗಳು ಅಥವಾ ಬರವಣಿಗೆಗಳನ್ನು ಹೊಂದಿರದಂತೆ, ಪರೀಕ್ಷಾರ್ಥಿಗಳು ಒಬ್ಬರಿಗೊಬ್ಬರು ಸಹಾಯ ಹಾಗೂ ನಕಲು ಮಾಡದಂತೆ, ಪುಸ್ತಕ ಅಥವಾ ಇತರೆ ಬರವಣಿಗೆಗಳಿಂದ ನಕಲು ಮಾಡದಂತೆ, ಶರೀರದ ಯಾವುದೇ ಅಂಗಗಳ ಮೇಲೆ ಬರೆಯದಂತೆ ಹಾಗೂ ಬೇರೆ ಯಾವುದೇ ರೀತಿಯ ಅನುಚಿತ ಮಾರ್ಗಗಳನ್ನು ಅನುಸರಿಸದಂತೆ ಪರೀಕ್ಷಾ ಮೇಲ್ವಿಚಾರಕರು ಅಥವಾ ಶಿಕ್ಷಕರು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಪರೀಕ್ಷೆ ಕೈಗೊಳ್ಳಬೇಕು. ಪರೀಕ್ಷಾ ಕೊಠಡಿಯಲ್ಲಿ ಅಭ್ಯರ್ಥಿಗಳು ಮೋಬೈಲ್ ಫೋನ್ ಅಥವಾ ಯಾವುದೇ ಇಲೆಕ್ಟ್ರಾನಿಕ್ ವಸ್ತುಗಳನ್ನು (ಕ್ಯಾಲಕ್ಯುಲೇಟರ್ ಹೊರತುಪಡಿಸಿ) ಹೊಂದಿರಲು ಅವಕಾಶವಿರುವದಿಲ್ಲ.

12.1.6 ವಿದ್ಯಾರ್ಥಿಗಳು ಮೇಲಿನ ನಿಬಂಧನೆಗಳಲ್ಲಿನ ಯಾವುದೇ ಅಥವಾ ಎಲ್ಲಾ ಅನುಚಿತ ಕ್ರಮಗಳಲ್ಲಿ ಭಾಗಿಯಾಗಿದ್ದರೆ ಪರೀಕಷಾ ಮೇಲ್ವಿಚಾರಕರು ಅಥವಾ ಶಿಕ್ಷಕರು ಅಂತಹ ವಿದ್ಯಾರ್ಥಿಗಳಿಂದ ಪೇಪರ ಅಥವಾ ಬುಕ್ ಇತರೆ ವಸ್ತುಗಳನ್ನು ವಶಪಡಿಸಿಕೊಂಡು ಆ ವಿದ್ಯಾರ್ಥಿಯಿಂದ ಲಿಖಿತ ಹೇಳಿಕೆಯನ್ನು ಅಥವಾ ವಿವರವನ್ನು ತಪ್ಪದೇ ಪಡೆದುಕೊಳ್ಳಬೇಕು.

1. ವಿದ್ಯಾರ್ಥಿಯು ಯಾವುದೇ ಹೇಳಿಕೆ ಅಥವಾ ವಿವರವನ್ನು ನೀಡಲು ನಿರಾಕರಿಸಿದಲ್ಲಿ, ಅದನ್ನು ಬರವಣಿಗೆಯಲ್ಲಿ ಕೊಡಲು ಸೂಚಿಸಬೇಕು. ವಿದ್ಯಾರ್ಥಿಯು ಅದಕ್ಕೂ ಒಪ್ಪದಿದ್ದಲ್ಲಿ ಈ ಘಟನೆಯ ಸಂಪೂರ್ಣ ವಿವರವನ್ನು ಸಿಬ್ಬಂದಿಯೊಬ್ಬರ ಸಮ್ಮುಖದಲ್ಲಿ ಸಾಕ್ಷಿಯಾಗಿ ದಾಖಲಿಸಿಕೊಳ್ಳಬೇಕು.

2. ಇಂತಹ ವಿದ್ಯಾರ್ಥಿಯು ಉತ್ತರಪತ್ರಿಕೆಯ ಮೇಲೆ ಪರೀಕ್ಷಾ ಮೇಲ್ವಿಚಾರಕರು ಅಥವಾ ಶಿಕ್ಷಕರು ತಮ್ಮ ಸೂಕ್ತ ಶರಾವನ್ನು ನಮೂದಿಸಿ ಮತ್ತೊಬ್ಬ ಪರೀಕ್ಷಾ ಮೇಲ್ವಿಚಾರಕರ ಅಥವಾ ಶಿಕ್ಷಕರ ಸಾಕ್ಷಿ ಸಮೇತ ರುಜುಮಾಡಬೇಕು. ನಂತರ ಆ ವಿದ್ಯಾರ್ಥಿಯನ್ನು ಪರೀಕ್ಷಾ ಕೊಠಡಿಯಿಂದ ಹೊರಹಾಕಬೇಕು.

12.1.7 ಎಲ್ಲಾ ಅನುಚಿತ ವರ್ತನೆಯ ಘಟನೆಗಳನ್ನು ತಕ್ಷಣ ಸಂಬಂಧಿಸಿದ ಪ್ರಾಚಾರ್ಯರ ಗಮನಕ್ಕೆ ಶಿಸ್ತು ಕ್ರಮಕ್ಕಗಿ ತರಬೇಕು.

12.1.8 ಪ್ರಾಚಾರ್ಯರ ಗಮನಕ್ಕೆ ತರಲಾದ ಎಲ್ಲಾ ಅನುಚಿತ ವರ್ತನೆಯ ಘಟನೆಗಳನ್ನು ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿನ ಪಾಲಿಟೆಕ್ನಿಕಿನ ಇಬ್ಬರು ಶಿಕ್ಷಕರುನ್ನೊಳಗೊಂಡ (ವರದಿ ಮಾಡಿದ ಶಿಕ್ಷಕರನ್ನು ಹೊರತುಪಡಿಸಿ) "ಅನುಚಿತ ವರ್ತನೆಗಳ ವಿಚಾರಣಾ ಸಮಿತಿ" ಯು ಕೂಲಂಕುಷವಾಗಿ ಪರೀಕ್ಷಿಸಿ ಅಥವಾ ವಿಚಾರಿಸಿ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳವದು.

12.1.9 ಈ ಸಮಿತಿಯು ತಪ್ಪಿತಸ್ಥ ವಿದ್ಯಾರ್ಥಿಯನ್ನು ಒಂದು ಸೆಮಿಸ್ಟರ್‌ಗಳ ಅವಧಿಗೆ ವ್ಯಾಸಂಗದಿಂದ ಉಚ್ಚಾಟಿಸಬಹುದು (debar).

12.1.1 ಈ ವಿಷಯದಲ್ಲಿ ವಿಚಾರಣಾ ಸಮಿತಿಯ ನಿರ್ಣಯಗಳೇ ಅಂತಿಮ, ಮುಂದಿನ ಹಂತದ ಮನವಿಗಾಗಿ "ಕುಲಪತಿಗಳು" ಸಕ್ಷಮ ಪ್ರಾಧಿಕಾರವಾಗಿರುವರು.

## 12.2 ವಿದ್ಯಾರ್ಥಿಗಳಿಗೆ :

12.2.1 ಎಲ್ಲ ರೀತಿಯ ಪರೀಕ್ಷೆಗಳನ್ನು ವಿಶ್ವವಿದ್ಯಾಲಯದ ಪರೀಕ್ಷೆಗಳೆಂದು ಪರಿಗಣಿಸಿ ವಿದ್ಯಾರ್ಥಿಗಳು ಅದರಂತೆ ನಿಯಮಾನುಸಾರ ನಡೆದುಕೊಳ್ಳಬೇಕು.

12.2.2 ಯಾವುದೇ ವಿದ್ಯಾರ್ಥಿಯು ಹಾಳೆಗಳೊಂದಿಗೆ, ಬರವಣಿಗೆಗಳೊಂದಿಗೆ, ಮೋಬೈಲ್ ಫೋನ್‌ಗಳೊಂದಿಗೆ ಹಾಗೂ ಪ್ರಶ್ನಾವಳಿಗಳಿಗೆ ಉತ್ತರಿಸಲು ಸಹಾಯಕವಾಗುವ ಯಾವುದೇ ವಸ್ತುಗಳೊಂದಿಗೆ ಪರೀಕ್ಷಾ ಕೊಠಡಿಯನ್ನು ಪ್ರವೇಶಿಸುವಂತಿಲ್ಲ.

12.2.3. ಪ್ರತಿ ವಿದ್ಯಾರ್ಥಿಯು ಪರೀಕ್ಷೆ ಪ್ರಾರಂಭವಾಗುವ ಮೊದಲು ತನ್ನಲ್ಲಿರುವ ಹಾಗೂ ತನ್ನ ಸೀಟಿನ ಟೇಬಲ್ ಅಥವಾ ಡೆಸ್ಕ್‌ನಲ್ಲಿರುವ ಯಾವುದೇ ರೀತಿಯ ಹಾಳೆಗಳು, ಬರವಣಿಗೆಯನ್ನು ಪರೀಕ್ಷಾ ಮೇಲ್ವಿಚಾರಕರಿಗೆ ಅಥವಾ ಶಿಕ್ಷಕರಿಗೆ ಒಪ್ಪಿಸಬೇಕು. ವಿದ್ಯಾರ್ಥಿಯು ಪರೀಕ್ಷೆ ಬರೆಯುವಾಗ ಯಾವುದೇ ಹಾಳೆಗಳು, ಬರವಣಿಗೆಗಳು, ಇತ್ಯಾದಿ ಹೊಂದಿದ್ದಲ್ಲಿ, ಬೇರೆಯವರಿಂದ ಉತ್ತರ ಬರೆಯಲು ಸಹಾಯ ಪಡೆಯುತ್ತಿದ್ದಲ್ಲಿ ಅಥವಾ ಬೇರೆಯವರಿಗೆ ಸಹಾಯ ಮಾಡುತ್ತಿದ್ದಲ್ಲಿ ಹಾಗೂ ಬೇರೆ ಯಾವುದೇ ಅನುಚಿತ ಕ್ರಮಗಳನ್ನು ಅನುಸರಿಸುತ್ತಿದ್ದಲ್ಲಿ ಹಾಗೂ ತಮ್ಮ ಟೇಬಲ್ ಅಥವಾ ಡೆಸ್ಕ್ ಮೇಲೆ ಪ್ರಶ್ನಾವಳಿಗೆ ಸಂಬಂಧಪಟ್ಟಂತೆ ಯಾವುದೇ ಬರಹ, ಅಚ್ಚು ಕಂಡುಬಂದಲ್ಲಿ, ಆ ವಿಷಯವನ್ನು ಪರೀಕ್ಷಾ ಮೇಲ್ವಿಚಾರಕರಿಗೆ ಅಥವಾ ಶಿಕ್ಷಕರಿಗೆ ತಿಳಿಸದಿದ್ದಲ್ಲಿ, ಇಂತಹ ವಿದ್ಯಾರ್ಥಿಗಳನ್ನು ಒಂದು ಸೆಮಿಸ್ಟರ್ ಅವಧಿಗೆ ಡಿಬಾರ ಮಾಡಲಾಗುವುದು.

12.2.4 ಪರೀಕ್ಷಾ ಕೊಠಡಿಯಲ್ಲಿ ಯಾವುದೇ ವಿದ್ಯಾರ್ಥಿಯು ಗಂಭೀರ ಸ್ವರೂಪದ ಅನುಚಿತ ವರ್ತನೆಯಿಂದ ತಪ್ಪಿತಸ್ಥನಾದಲ್ಲಿ ಅಂತಹ ವಿದ್ಯಾರ್ಥಿಯನ್ನು ಒಂದು ಸೆಮಿಸ್ಟರ್ ಅವಧಿಗೆ ಡಿಬಾರ್ ಮಾಡಲಾಗುವುದು.

12.2.5 ವಿದ್ಯಾರ್ಥಿಗಳು ಪರೀಕ್ಷಾ ಮೇಲ್ವಿಚಾರಕರು ಅಥವಾ ಶಿಕ್ಷಕರು ಒದಗಿಸಿದ ಉತ್ತರ ಪತ್ರಿಕೆಗಳಲ್ಲಿ ಮಾತ್ರ ಉತ್ತರಗಳನ್ನು ಬರೆಯಬೇಕು.

12.2.7 ಈ ಮೇಲಿನ ಅನುಚಿತ ವರ್ತನೆಗಳಿಂದ ಯಾವುದೇ ವಿದ್ಯಾರ್ಥಿಯು ತಪ್ಪತಸ್ಥ ಎಂದು ಸಾಬಿತಾದಲ್ಲಿ ಅಂತಹ ವಿದ್ಯಾರ್ಥಿಗಳು ಶಿಕ್ಷಕರು ಕೇಳಿದಾಗ ಬರವಣಿಗೆಯಲ್ಲಿ ತಮ್ಮ ವಿವರಣೆಯನ್ನು ಅಥವಾ ಹೇಳಿಕೆಯನ್ನು ಪರೀಕ್ಷಾ ಮೇಲ್ವಿಚಾರಕರಿಗೆ ಅಥವಾ ಶಿಕ್ಷಕರಿಗೆ ಸಲ್ಲಿಸಬೇಕು. ಒಂದು ವೇಳೆ ಹೇಳಿಕೆ ಅಥವಾ ವಿವರಣೆಯನ್ನು ನೀಡಲು ವಿದ್ಯಾರ್ಥಿಯು

12.2.8 ಯಾವುದೇ ವಿದ್ಯಾರ್ಥಿಯು ಮೇಲಿನ ನಿಯಮ – ನಿಬಂಧನೆಗಳಿಗೆ ಒಳಪಟ್ಟು ಸೂಕ್ತವಾಗಿ ನಡೆದುಕೊಳ್ಳದಿದ್ದಲ್ಲಿ ಅದನ್ನು ಅಪರಾಧವೆಂದು ಪರಿಗಣಿಸಿ, ಆತನನ್ನು ಮುಂದಿನ ಶಿಕ್ಷೆಗೆ / ದಂಡಗಳಿಗೆ ಒಳಪಡಟಿಸಲಾಗುವುದು.

**13. ಬೋಧನಾ ಕ್ರಮ ಮತ್ತು ಶಿಸ್ತು ಪಾಲನೆ :**

13.1 ಎಲ್ಲ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನೀತಿ ನಿಯಮಗಳಿಗೆ ಬದ್ಧರಾಗಿದ್ದು, ಉತ್ತಮ ನಡತೆಯ ಜೊತೆಗೆ ವಿಶ್ವವಿದ್ಯಾಲಯದ ಕಾನೂನು ರೀತ್ಯ ಸ್ಥಾಪಿಸಲ್ಪಟ್ಟ ಇತರೆ ಅಂಗ ಸಂಸ್ಥೆಗಳ ನಡಾವಳಿಗಳನ್ನು ಗೌರವಿಸುವುದು.

13.2 ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಗುರುತು ಪತ್ರವನ್ನು ಇತ್ತೀಚಿನ ಭಾವಿತ್ರದೊಂದಿಗೆ ಪ್ರಾಚಾರ್ಯರ ಸಹಿ ಇರುವಂತೆ ಹೊಂದಿರತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಗುರುತು ಪತ್ರದ ಅವಶ್ಯಕತೆ ವ್ಯಕ್ತಪಡಿಸಿದಾಗ ತಪ್ಪದೆ ತೋರಿಸುವುದು. ಒಂದು ಸಾರಿ ಪಡೆದ ಗುರುತಿನ ಪತ್ರ (ಚೀಟಿ) ಡಿಪ್ಲೋಮಾ ಕೋರ್ಸ್ ಮುಗಿಯುವವರೆಗೂ ಚಾಲ್ತಿಯಲ್ಲಿರುತ್ತದೆ.

13.3 ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಹಾಗೂ ಇತರೆ ಸಾರ್ವಜನಿಕ ಆಸ್ತಿಗಳನ್ನು ಸಂರಕ್ಷಿಸಿ ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದು, ಒಂದು ಪಕ್ಷ ವಿದ್ಯಾರ್ಥಿಗಳು ಯಾವುದೇ ಕಾರಣದಿಂದ ವಿಶ್ವವಿದ್ಯಾಲಯದ / ಇತರೆ ಸಾರ್ವಜನಿಕ ಆಸ್ತಿಗಳಿಗೆ ಹಾನಿಮಾಡಿದರೆ, ವಿಶ್ವವಿದ್ಯಾಲಯದ ನಿಮಯಗಳ ಪ್ರಕಾರ ಹಾನಿಮಾಡಿದ ಆಸ್ತಿಯ ಬೆಲೆಯನ್ನು ಭರಿಸುವುದರ ಜೊತೆಗೆ ವಿಶ್ವವಿದ್ಯಾಲಯ ವಿಧಿಸುವ ಶಿಕ್ಷೆಗೆ ಅರ್ಹರಾಗಿರುತ್ತಾರೆ. ವಿದ್ಯಾರ್ಥಿಗಳಿಂದ ಹಾನಿಗೊಳಗಾದ ಆಸ್ತಿಯ ಮೌಲ್ಯದ ಬೆಲೆಯನ್ನು ವಿದ್ಯಾರ್ಥಿಗಳ ಮುಂಗಡ ಹಣದಿಂದ ಸಂದಾಯ ಮಾಡಲಾಗುತ್ತದೆ ಹಾಗೂ ಈ ವಿಚಾರದಲ್ಲಿ ವಿಶ್ವವಿದ್ಯಾಲಯದ ನಿರ್ಧಾರವೇ ಅಂತಿಮ.

13.4. ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಕಲಿಕೆಯು ಸಮಯದಲ್ಲಿ, ಮುಖ್ಯವಾಗಿ ಬೋಧನಾ ಕೊಠಡಿಗಳಲ್ಲಿ ವಿದ್ಯಾರ್ಥಿನಿಲಯದಲ್ಲಿ, ಗ್ರಂಥಾಲಯದಲಿ, ಶೈಕ್ಷಣಿಕ ಪ್ರವಾಸದಲ್ಲಿ, ತರಬೇತಿ ಸಮಯದಲ್ಲಿ, ಕ್ರೀಡಾ ಚಟುವಟಿಕೆಗಳಲ್ಲಿ ಅತ್ಯಂತ ವಿನಯ ಮತ್ತು ಉತ್ತಮ ನಡವಳಿಕೆಗಳನ್ನು ಪ್ರದರ್ಶಿಸತಕ್ಕದ್ದು.

13.5 ವಿದ್ಯಾರ್ಥಿಗಳು, ಜಾತಿ ಮತ ಹಾಗೂ ವರ್ಣದ ಆಧಾರದಲ್ಲಿ ಅನುಚಿತ ಚಟುವಟಿಕೆಗಳ ಮೂಲಕ ವಿಶ್ವವಿದ್ಯಾಲಯದ ದಿನನಿತ್ಯದ ಕಾರ್ಯಗಳಲ್ಲಿ ಅಡ್ಡಿಯುಂಟು ಮಾಡಬಾರದು.

13.6 **ಅನಾವಶ್ಯಕ ಪೀಡಿಸುವುದು (ರ್‍ಯಾಗಿಂಗ್) :**
ವಿಶ್ವವಿದ್ಯಾಲಯದ ಆವರಣದಲ್ಲಿ ರ್‍ಯಾಗಿಂಗ್ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ವಿದ್ಯಾರ್ಥಿಗಳು ರ್‍ಯಾಗಿಂಗ್‌ನಲ್ಲಿ ಭಾಗವಹಿಸಿದರೆ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಸರ್ಕಾರದ ನಿಯಮಗಳ ಪ್ರಕಾರ ಸೂಕ್ತ ಶಿಕ್ಷೆಯನ್ನು ವಿಧಿಸಲಾಗುವುದು.

13.7 ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ತಮ್ಮ ತರಗತಿಗಳಲ್ಲಿ ಹಾಜರಾಗತಕ್ಕದ್ದು ಹಾಗೂ ತಡವಾಗಿ ಬರುವ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ / ನೀಡದೇ ಇರುವ ನಿರ್ಧಾರದ ಹಕ್ಕನ್ನು ಸಂಪೂರ್ಣವಾಗಿ ಸಂಬಂಧಿಸಿದ ಬೋಧಕರಿಗೆ ನೀಡಲಾಗಿದೆ.

13.8 ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸುವುದು / ಪರೀಕ್ಷೆಗಳನ್ನು ಬಹಿಷ್ಕರಿಸುವುದು ಅಶಿಸ್ತಿನ ವಿಚಾರವೆಂದು ಪರಿಗಣಿಸಿ ಸೂಕ್ತ ಶಿಕ್ಷೆಗೆ ಗುರಿಪಡಿಸಲಾಗುವುದು.

13.9 ಪಠ್ಯಕ್ರಮಕ್ಕೆ ನೋಂದಣಿ ಮಾಡಿಸದೆ ತರಗತಿಗಳಲ್ಲಿ ಭಾಗವಹಿಸುವಂತಿಲ್ಲ. ಒಂದು ಪಕ್ಷ ಭಾಗವಹಿಸಬೇಕೆಂದರೆ ವಿದ್ಯಾರ್ಥಿಗಳು ಸಂಬಂಧಪಟ್ಟ ಬೋಧಕರಿಂದ ಅನುಮತಿ ಪಡೆಯಬೇಕಾಗುವುದು.

13.10 ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳು ಮಧ್ಯಪಾನ ಮತ್ತು ಧೂಮಪಾನ ಮಾಡುವುದು ಹಾಗೂ ಯಾವುದೇ ತೆರನಾದ ಮಧ್ಯವನ್ನು ಹೊಂದಿರುವುದು, ಮಾದಕವಸ್ತುಗಳಿಗೆ ದಾಸರಾಗಿರುವುದು, ಜೂಜಾಟಗಳಲ್ಲಿ ತೊಡಗಿರುವುದು ಹಾಗೂ ತಮ್ಮೊಂದಿಗೆ ಮಾರಕಾಸ್ತ್ರಗಳನ್ನು ಹೊಂದಿರುವುದು ವಿಶ್ವವಿದ್ಯಾಲಯದ ಕಾನೂನಿಕ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು ಸೂಕ್ತ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.

13.11 ವಿದ್ಯಾರ್ಥಿಗಳು ಮೇಲ್ಕಂಡ ಯಾವುದೇ ಕಾನೂನು ಬಾಹಿರ ಹಾಗೂ ಅಶಿಸ್ತಿನ ಚಟುವಟಿಕೆಗಳಲ್ಲಿ ಭಾಗವಹಿಸಿರುವುದು ಸಾಬೀತಾದರೆ, ಅಂತಹವರ ವಿದ್ಯಾರ್ಥಿವೇತನ ಹಾಗೂ ಇತರೆ ವಿನಾಯಿತಿಗಳನ್ನು ರದ್ದುಪಡಿಸಿ ಮುಂದಿನ ವಿಚಾರಣೆಗೊಳಪಡಿಸಿ, ಶಿಕ್ಷೆ ವಿಧಿಸಲು ವಿಶ್ವವಿದ್ಯಾಲಯ ಬದ್ಧವಾಗಿರುತ್ತದೆ.

13.12 ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ನಿಗದಿಪಡಿಸಿದ ಹಬ್ಬಗಳ ದಿನಗಳಂದು ಮಾತ್ರ ಹಬ್ಬಗಳನ್ನು ಶಿಸ್ತಿನಿಂದ ಆಚರಿಸತಕ್ಕದ್ದು ಹಾಗೂ ಆ ದಿನಗಳಂದು ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸಿದ್ದು ಕಂಡುಬಂದರೆ ಕಾನೂನು ರೀತಿ ಅಶಿಸ್ತೆಂದು ಪರಿಗಣಿಸಿ ಸೂಕ್ತ ಕ್ರಮಕ್ಕೆ ಶಿಫಾರಸ್ಸು ಮಾಡಲಾವುದು.

13.13 ಮೇಲೆ ತಿಳಿಸಿರುವ ವಿಶ್ವವಿದ್ಯಾಲಯದ ನಿಯಮಗಳನ್ನು ಉಲ್ಲಂಘಿಸಿದರೆ ಪ್ರಾಚಾರ್ಯರು ವಿಶ್ವವಿದ್ಯಾಲಯದ ಗಮನಕ್ಕೆ ತಂದು ಸೂಕ್ತ ಶಿಸ್ತು ಕ್ರಮಕ್ಕಾಗಿ ಶಿಫಾರಸು ಮಾಡುವುದು.

13.14 ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಆ ವಿಚಾರವನ್ನು ಪ್ರಾಚಾರ್ಯರು ವಿದ್ಯಾರ್ಥಿಯ ಆಶಿಸ್ತಿನ ವರ್ತನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಸೂಕ್ತ ಹಾಗೂ ಶೀಘ್ರ ಕ್ರಮ ಜರುಗಿಸಬಹುದು. ಆ ಕ್ರಮಗಳು, ಸೂಕ್ತ ಎಚ್ಚರಿಕೆ ನೀಡುವುದು, ದಂಡವಿಧಿಸುವುದು, ವಿದ್ಯಾರ್ಥಿನಿಲಯದಿಂದ ಹೊರಹಾಕುವುದು / ತರಗತಿಗಳಲ್ಲಿ ಭಾಗವಹಿಸುವುದರ ವಿರುದ್ಧ ಅಮಾನತ್ತುಗೊಳಿಸುವುದು ಇತ್ಯಾದಿ ಅಶಿಸ್ತಿನ ರೀತ್ಯಾನುಸಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

13.15 ವಿದ್ಯಾರ್ಥಿಗಳು ಮೇಲ್ಕಂಡ ಯಾವುದೇ ವಿಚಾರದಲ್ಲಿ ಅಪರಾಧಿ ಎಂದು ಪ್ರಾಚಾರ್ಯರು ಮುಖೇನ ಸಾಬೀತಾದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ದಂಡ ಹಾಕುವುದು / ಅಮಾನತು ಮಾಡುವುದು / ಪಾಲೆಟೆಕ್ನಿಕ್‌ನಿಂದ ಹಾಗೂ ವಿದ್ಯಾರ್ಥಿನಿಲಯದಿಂದ ಹೊರಹಾಕುವುದರ ಜೊತೆಗೆ ವಿದ್ಯಾರ್ಥಿ ಪ್ರತಿನಿಧಿ ಹಾಗೂ ವಿದ್ಯಾರ್ಥಿನಿಲಯದ ನಿರ್ವಹಣಾ ಸಮಿತಿಗಳಲ್ಲಿ ಸದಸ್ಯತ್ವ ಪಡೆಯುವುದರ ವಿರುದ್ಧ ಕನಿಷ್ಠ ಎರಡು ವರ್ಷ ನಿಷೇಧ ಹಾಕಲಾಗುವುದು.

13.16. ಒಂದು ವೇಳೆ ವಿದ್ಯಾರ್ಥಿಗಳು ಕಾನೂನು ಬಾಹಿರ ಚಟುವಟಿಕೆ ನಡೆಸಿ 24 ಗಂಟೆ ಅಥವಾ ಅಧಿಕ ಅವಧಿಗೆ ಪೋಲೀಸ್ ಬಂಧನಕ್ಕೆ ಒಳಪಟ್ಟರೆ ಅಂತಹವನ್ನು ವಿಶ್ವವಿದ್ಯಾಲಯವು ಯಾವುದೇ ವಿಚಾರಣೆಗೊಳಪಡಿಸದೆ ವಿಶ್ವವಿದ್ಯಾಲಯದಿಂದ ಹೊರಹಾಕಬಹುದು ಹಾಗೂ ಇತರೆ ಯಾವುದೇ ಪರಿಣಾಮಗಳನ್ನು ಎದುರಿಸಲು ಅಭ್ಯರ್ಥಿಯು ತಯಾರಿರಬೇಕು.

13.17 ಮೇಲಿನ ಎಲ್ಲಾ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳವರ ನಿರ್ಣಯವೇ ಅಂತಿಮವಾದದ್ದು.

**14.0 ಫಲಿತಾಂಶ ಅನುಮೊದಿಸುವ ಹಾಗೂ ಪ್ರಮಾಣ ಪತ್ರ ನೀಡುವ ಪ್ರಾಧಿಕಾರ :**

ಪ್ರಾಚಾರ್ಯರು ಹಾಗೂ ಕುಲಸಚಿವರು ಶಿಫಾರಸು ಮಾಡಿದ ಫಲಿತಾಂಶಗಳನ್ನು ಕುಲಪತಿಗಳು ಅನುಮೋದಿಸುವರು. ಕುಲಸಚಿವರು ಸಂಬಂಧಪಟ್ಟ ವಿಷಯದ ತಾತ್ಕಾಲಿಕ ಅಂಕಪಟ್ಟಿ ಹಾಗೂ ಕೋರ್ಸ್‌ನ ಪ್ರಮಾಣ ಪತ್ರಗಳನ್ನು ಯಶಸ್ವಿಯಾದ ವಿದ್ಯಾರ್ಥಿಗಳಿಗೆ ಬೇಬಾಕಿ ವಿವರ ಖಾತ್ರಿ ಪಡಿಸಿಕೊಂಡು ಒದಗಿಸುವುದು. ಅಂತಿಮ ಫಲಿತಾಂಶಗಳನ್ನು ಸಂಬಂಧಪಟ್ಟ ಅಧ್ಯಯನ ಮಂಡಳಿ (ಬೋರ್ಡ್ ಆಫ್ ಸ್ಟಡೀಸ್), ವಿದ್ಯಾ ವಿಷಯಕ ಪರಿಷತ್ (ಅಕ್ಯಾಡೆಮಿಕ್ ಕೌನ್ಸಿಲ್) ಹಾಗೂ ವ್ಯವಸ್ಥಾಪನಾ ಮಂಡಳಿ ಅನುಮೋದಿಸುವರು

ಸೂಕ್ತ ಕಾನೂನಿಕ ಕ್ರಮಗಳ ಅನುಸಾರ ಅಫಿಡವೇಟ್‌ದೊಂದಿಗೆ ವಿದ್ಯಾರ್ಥಿಯು ತನ್ನ ಹೆಸರನ್ನು ಬದಲಾವಣೆ ಮಾಡಿಕೊಂಡ ಸಂದರ್ಭಗಳಲ್ಲಿ ಈ ದಾಖಲೆಗಳನುಸಾರ ವಿದ್ಯಾರ್ಥಿಯ ಅಂಕಪಟ್ಟಿ ಹಾಗೂ ಕೋರ್ಸ್‌ನ ಪ್ರಮಾಣ ಪತ್ರದಲ್ಲಿ ಹೆಸರನ್ನು ಸೂಕ್ತವಾಗಿ ಬದಲಾವಣೆ ಮಾಡಬಹುದಗಿದೆ. ಆದರೆ ಅಂತಹ ವಿವರ ದಾಖಲೆಗಳನ್ನು ಪ್ರಮಾಣ ಪತ್ರ ನೀಡಿದ ನಂತರ ಹೆಸರು ಬದಲಾವಣೆಗೆ ವಿವರ ದಾಖಲೆ ಹಾಗೂ ನಿವೇದನೆ ಸಲ್ಲಿಸಿದಲ್ಲಿ ವಿಶ್ವವಿದ್ಯಾಲಯವು ಅದನ್ನು ಪರಿಗಣಿಸುವುದಿಲ್ಲ ಹಾಗೂ ವಿದ್ಯಾರ್ಥಿಯ ಹೆಸರನ್ನು ಬದಲಾವಣೆ ಮಾಡುವುದಿಲ್ಲ.

**15.0 ಇತರೆ ವಿಷಯಗಳು :**

15.1. ಡಿಪ್ಲೋಮಾಗೆ ಸಂಬಂಧಪಟ್ಟಂತೆ ವಿದ್ಯಾವಿಷಯಕ ಪರಿಷತ್ತಿನ ಯಾವುದೇ ನಿಬಂಧನೆಗಳು ಈ ಕೋರ್ಸ್ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಯಾವುದೇ ಸಂದರ್ಭಗಳಲ್ಲಿ ಸೂಕ್ತ ರೀತಿಯಲ್ಲಿ ಬಗೆಹರಿಸುವ ಅಥವಾ ವಿದ್ಯಾರ್ಥಿಗಳ ವಿಷಯದಲ್ಲಿ ಸೂಕ್ತವಾಗಿ ಸ್ಪಂದಿಸುವ ಹಕ್ಕನ್ನು ಮೊಟಕುಗೊಳಿಸುವುದಿಲ್ಲ.

15.2 ವಿದ್ಯಾವಿಷಯಕ ಪರಿಷತ್ತಿನಿಂದ ಕಾಲಕಾಲಕ್ಕೆ ಆಗುವ ತಿದ್ದುಪಡಿಗಳೂ ಆದು ನಿನಗದಿಪಡಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ. ಹಾಗೂ ಆ ದಿನಾಂಕದಂದು ನೋಂದಣಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಈ ನಿಬಂಧನೆಗಳಿಗೆ ಒಳಪಡುತ್ತಾರೆ.

15.3. ಈ ನಿಯಮ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳುವಾಗ ಯಾವುದೇ ರೀತಿಯ ತೊಂದರೆ, ಅಡಚಣೆಗಳು ಕಂಡುಬಂದಲ್ಲಿ ಅಥವಾ ಕೆಲವು ನಿಯಮಗಳನ್ನು ಅರ್ಥೈಸುವಲ್ಲಿ ಸಾಧ್ಯವಿಲ್ಲದಾಗ, ವಿದ್ಯಾವಿಷಯಕ ಪರಿಷತ್ತಿನ ನಿರ್ಧಾರವೇ ಅಂತಿಮವಾದದ್ದು ಹಾಗೂ ಎಲ್ಲರೂ ಆ ನಿರ್ಧಾರಕ್ಕೆ ಬದ್ಧರಾಗಿರುವರು.

* * * * *